ಇಲ್ಲವೆಂದರೆ ಭಯವಿರುವುದಿಲ್ಲ. ನಾವೆಲ್ಲಾ ಪಕ್ಷಾತೀತವಾಗಿ ಸಮಿತಿಯಲ್ಲಿ ಚರ್ಚೆ ಮಾಡಿ, ಆಡಳಿತವನ್ನು ಚುರುಕುಗೊಳಿಸುವಂಥದಕ್ಕೆ ದೃಷ್ಟಿಯಿಂದ ವರದಿ ಮಾಡಿರುತ್ತೇವೆ.

ಅಧ್ಯಕ್ಷರು:– ತಾವು Senior Member ಆಗಿದ್ದೀರಿ. ತಾವು ವರದಿಯನ್ನು ಸಭೆಯ ಮುಂದೆ ಸಲ್ಲಿಸಿದ್ದೀರಿ, ಈಗ ಸಲ್ಲಿಸಲಾಯಿತೆಂದು ಅಷ್ಟೇ ಹೇಳಿ, ಬಾಕಿ ವಿಚಾರವನ್ನು ಆಮೇಲೆ ಮಾತನಾಡೋಣ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:– ಸ್ವಲ್ಪ request ಮಾಡಿದೆ. ಈ ವಿಷಯವಾಗಿ ಸರ್ಕಾರ ಗಮನ ಹರಿಸಿದರೆ effective ಆಗಿ ಕೆಲಸವಾಗುತ್ತದೆ, ಇಲ್ಲದಿದ್ದರೆ ಭಯವಿರುವುದಿಲ್ಲ. ನಾವು ಮಾಡಿ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು:– ಈ ಭಾಷೆಯನ್ನು ಯಾರಾದರೂ ಹೇಳುತ್ತಾರೆ?

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:– ಆಯಿತು, ನಮಸ್ಕಾರ.

ಅಧ್ಯಕ್ಷರು:– ಈಗ ಶೂನ್ಯ ವೇಳೆ, ಮಾನ್ಯ ಸಿ.ಟಿ. ರವಿ ಕೇಳಿ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ದಿನಾಂಕ: 05.06.2015 ರಂದು ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಸಾ: ಹುಡೇ ಗ್ರಾಮದ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಣ ಮಾಡಿರುವ ಬಗ್ಗೆ.

*****

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಸಹದೇವಪ್ಪ ಮಾರುತೆಪ್ಪ ರಾವಳ ಎನ್ನುವವರ ಮಗಳಾದ ಕುಮಾರಿ ದೀಪಾ ಎನ್ನುವವರನ್ನು ಅದೇ ಗ್ರಾಮದ

ಹಜರತ್ ಅಲಿ ನನ್ನೇಸಾಬ ಬಡಗಿ ಎಂಬುವವರು ಕೆಲವರ ಸಹಕಾರದಿಂದ ದಿನಾಂಕ: 05.06.2015 ರಂದು ಅಪಹರಿಸಿದ್ದು, ಅಪ್ರಾಪ್ತ ವಯಸ್ಸಿನ ಇವಳ ಅಪಹರಣದ ಕುರಿತು ಅವರ ತಂದೆ ದಿನಾಂಕ: 06.06.2015 ರಂದು ಸಂಬಂಧಪಟ್ಟ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿಕೊಳ್ಳುವಂತೆ ಪಿ.ಎಸ್.ಐ. ಮಹಾದೇವ ಎಲ್. ಯಲಿಗಾರರವರನ್ನು ಕೋರಿದ್ದರೂ ಸಹ ಪಿ.ಎಸ್.ಐ. ದೂರು ದಾಖಲಿಸಿಕೊಳ್ಳದೇ ದೂರು ದಾಖಲಿಸಲು ತೆರಳಿದ್ದವರಿಗೆ ಬೆದರಿಸಿ ವಾಪಸ್ಸು ಕಳುಹಿಸಿರುತ್ತಾರೆ.

ಅಧ್ಯಕ್ಷರು:– ಮಾನ್ಯ ರವಿಯವರೆ, ನಿಮಗೆ ಉತ್ತರ ಕೊಟ್ಟಿದ್ದಾರೆ?

ಶ್ರೀ ಸಿ.ಟಿ. ರವಿ:– ಉತ್ತರ ಕೊಟ್ಟಿಲ್ಲ. ಹಾಗಾಗಿ ದೀಪಾಳನ್ನು ರಕ್ಷಣೆ ಮಾಡಬೇಕು ಮತ್ತು ದೂರು ದಾಖಲಿಸಿಕೊಳ್ಳದೇ ಇರುವ ಪಿಎಸ್ಐ ಮೇಲೆ ಕ್ರಮ ಕೈಗೊಳ್ಳಬೇಕು.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ಸದರಿ ಪ್ರಕರಣದಲ್ಲಿ ದಿ: 05.06.2015 ರಂದು ಸಂಜೆ 18.00 ಗಂಟೆ ಸುಮಾರಿಗೆ ಆರೋಪಿ–1 ಹಜರತ್ ಅಲಿ ನನ್ನೇಸಾಬ ಬಡಗಿ ಈತನು ಇತರ 07 ಜನ ಆರೋಪಿತರೊಂದಿಗೆ ಪ್ರಕರಣದ ಪಿರ್ಯಾದಿ ಸಹದೇವಪ್ಪ ಮಾರುತ್ತೆಪ್ಪ ರಾವಳ ಇವರ ಮಗಳಾದ ಕುಮಾರಿ ದೀಪಾ (ವಯಸ್ಸು–17 ವರ್ಷ 11 ತಿಂಗಳು) ಇವಳು ಅಪ್ರಾಪ್ತ ಬಾಲಕಿ ಅಂತಾ ಗೊತ್ತಿದ್ದರೂ ಸಹ ಅವಳಿಗೆ ಅಸೆ ಆಮೀಷ ತೋರಿಸಿ ಅಪಹರಣ ಮಾಡಿಕೊಂಡು ಹೋಗುವ ಉದ್ದೇಶದಿಂದ ಪಿರ್ಯಾದಿಯು ಮನೆಯಲ್ಲಿ ಇಲ್ಲದಿರುವಾಗ ತಮ್ಮ ಮನೆಗೆ ಕರೆದುಕೊಂಡು ಹೋಗಿ ಬಚ್ಚಿಟ್ಟಿದ್ದು ಈ ಬಗ್ಗೆ ಪಿರ್ಯಾದಿದಾರನು ಇತರ ಸಾಕ್ಷಿದಾರರುಗಳನ್ನು ಕರೆದುಕೊಂಡು ಆರೋಪಿತನ ಮನೆಗೆ ಹೋಗಿ ವಿಚಾರಿಸಿದಾಗ ಅರೋಪಿತರೆಲ್ಲರೂ ಪಿರ್ಯಾದಿ ಮತ್ತು ಸಾಕ್ಷಿದಾರರಿಗೆ ನಿಮ್ಮ ಮಗಳನ್ನು ಕರೆದುಕೊಂಡು ಹೋಗಲು ನಮ್ಮ ಮನೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು ಅಲ್ಲದೇ ಒಂದನೇ ಆರೋಪಿ ಹಜರತ್ ಅಲಿ ನನ್ನೇಸಾಬ ಬಡಗಿ ಸಾ: ಹುಡೇ ಈತನು ಪಿರ್ಯಾದಿಯ ಮಗಳು ಕುಮಾರಿ ದೀಪಾ ಇವಳೊಂದಿಗೆ ಲೈಂಗಿಕ

ದೌರ್ಜನ್ಯ ವೆಸಗಿದ ಕುರಿತು ಪಿರ್ಯಾದಿದಾರನು ದಿನಾಂಕ: 30.06.2015 ರ ಪಿರ್ಯಾದಿಯನ್ನು ದಿನಾಂಕ: 01.07.2015 ರಂದು ರಾತ್ರಿ 08.45 ಗಂಟೆಗೆ ಹಾನಗಲ್ ಠಾಣೆಗೆ ಪಿರ್ಯಾದಿ ನೀಡಿದ್ದರ ಅನ್ವಯ ಹಾನಗಲ್ ಠಾಣಾ ಅಪರಾಧ ಸಂಖ್ಯೆ: 114/2015 ಕಲಂ 143, 147, 363, 368, 506 ಸಹಕಲಂ 149 ಐಪಿಸಿ ಮತ್ತು 11 ಪೋಕ್ಸೋ ಕಾಯ್ದೆ–2012 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅಪಹರಣವಾದ ಬಾಲಕಿ ಹಾಗೂ ಪ್ರಕಣದಲ್ಲಿನ ಆರೋಪಿತರ ಶೋಧ ಕಾರ್ಯ ಮುಂದುವರೆದಿದೆ.

ಕುಮಾರಿ ದೀಪಾ ಇವಳು ಅಪಹರಣಕ್ಕೆ ಒಳಗಾದ ದಿನಾಂಕದಿಂದ 01.07.2015 ವರೆಗಿನ ಪ್ರಕರಣ ದಾಖಲು ಮಾಡಲು ವಿಳಂಬಕ್ಕೆ ಕಾರಣವೇನು ಮತ್ತು ಹಾನಗಲ್ ಠಾಣಾ ಪಿಎಸ್ಐ ಎಂ.ಎಲ್ ಯಲಿಗಾರ ಇವರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಕೂಲಕಂಷವಾಗಿ ಪರಿಶೀಲನೆ ನಡೆಸಿ ವರದಿ ನೀಡುವಂತೆ ಡಿಎಸ್ಪಿ, ಶಿಗ್ಗಾವಿ ಉಪ–ವಿಭಾಗದವರಿಗೆ ಸೂಚನೆ ನೀಡಲಾಗಿದೆ.

ಪೊಲೀಸ್ ಮಹಾನಿರೀಕ್ಷಕರು, ಪೂರ್ವ ವಲಯ, ದಾವಣಗೇರಿ ಇವರ ಆದೇಶ ಸಂಖ್ಯೆ: 12/ಸಿಬ್ಬಂದಿ/2015–16, ದಿನಾಂಕ: 06.06.2015 ರಂತೆ ಶ್ರೀ ಎಂ.ಎಲ್. ಯಲಿಗಾರ, ಪಿಎಸ್ಐ ಹಾನಗಲ್ ಪಿಎಸ್, ಇವರಿಗೆ ಹಾನಗಲ್ ಪಿಎಸ್ ದಿಂದ ಆಗುಂಬೆ ಪೊಲೀಸ್ ಠಾಣೆಗೆ ಅನ್ಯ ಕರ್ತವ್ಯದ ಮೇರೆಗೆ ನಿಯೋಜಿಸಲಾಗಿರುತ್ತದೆ. ಸದರಿಯವರು ದಿನಾಂಕ: 06.06.2015 ರಿಂದ 10.06.2015 ರವರೆಗೆ ಠಾಣೆಯ ಪ್ರಭಾರದಲ್ಲಿರದೇ ಅನ್ಯ ಕರ್ತವ್ಯದ ಮೇರೆಗೆ ಬೇರೆ ಸ್ಥಳಗಳಿಗೆ ಹೋಗಿದ್ದು ಈ ಕುರಿತು ಸಹ ಪರಿಶೀಲಿಸಿ ವರದಿ ನೀಡುವಂತೆ ಡಿಎಸ್ಪಿ, ಶಿಗ್ಗಾವಿ ಉಪ–ವಿಭಾಗ ರವರಿಗೆ ಸೂಚನೆ ನೀಡಲಾಗಿದೆ. ಸದರಿ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು.

ಅಧ್ಯಕ್ಷರು:– ಇದರಲ್ಲಿ ಯಾವುದು ಕೊರತೆ ಇದೆ, ಅದರ ಬಗ್ಗೆ ಏನಾದರೂ ಪ್ರಶ್ನೆ ಇದ್ದರೆ ಕೇಳಿ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಪಿಎಸ್ಐ complaint ತೆಗೆದುಕೊಳ್ಳಬೇಕಾಗಿರುವುದು ಅವರ duty ಅವರು complaint ತೆಗೆದುಕೊಳ್ಳದೇ ಫಿರ್ಯಾದುದಾರರನ್ನು ಬೆದರಿಸಿರುವಂಥ ಪಿಎಸ್ಐ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಮತ್ತು ಅಪ್ರಾಪ್ತ ವಯಸ್ಸಿನ ಆ ಹೆಣ್ಣು ಮಗಳನ್ನು ರಕ್ಷಿಸಬೇಕು. Police Station ಗೆ complaint ಕೊಟ್ಟು ಎರಡು ತಿಂಗಳಾದರೂ ಕೂಡ ರಕ್ಷಣೆಯೇ ಇಲ್ಲವೆಂದರೆ, ಇನ್ನು ಯಾರಿಗೆ ರಕ್ಷಣೆ ಸಿಗುತ್ತದೆ? ಅವರನ್ನು ರಕ್ಷಣೆ ಮಾಡಬೇಕು, ಅವರನ್ನು ಮಾಡಿದ್ದಾರಾ?

ಅಧ್ಯಕ್ಷರು:– ಮಾನ್ಯ ಮಂತ್ರಿಯವರೆ, ಉತ್ತರ ಹೇಳಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಪಿಎಸ್ಐ ರವರನ್ನು 6ನೇ ತಾರೀಖಿನ ದಿವಸ ಐಜಿಯವರು ಬೇರೆ ಕಡೆಗೆ deputation ಕಳುಹಿಸಬೇಕೆಂದು order ಮಾಡಿದ್ದಾರೆ.

ಅಧ್ಯಕ್ಷರು:– ಅವರನ್ನು ಕಳುಹಿಸುವುದರಿಂದ ಬಗೆಹರಿಯುವುದಿಲ್ಲ. ಅವರಿಗೆ ಸರಿಯಾಗಿ ಬರೆ ಹಾಕಿ ಕಳುಹಿಸಬೇಕು, ಅವರನ್ನು suspend ಮಾಡಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಹೇಳುತ್ತೇನೆ. ಇದು POCSO case ನಲ್ಲಿ ಬರುತ್ತದೆ, ಅಪ್ರಾಪ್ತ ಬಾಲಕಿಯ ಮೇಲೆ ಎಂದು ಕೊಟ್ಟಿದ್ದಾರೆ. ಈಗ ಆ ಪಿಎಸ್ಐ ಯನ್ನು Circle Inspector POCSO case ಅನ್ನು ವಿಚಾರಣೆ ಮಾಡಬೇಕಾಗಿದೆ. ಈಗ ಹಾನಗಲ್ ತಾಲ್ಲೂಕಿನ Circle Inspector ರವರೆ ಆ ಕೇಸ್ನ ವಿಚಾರಣೆ ಮಾಡುತ್ತಿದ್ದಾರೆ. ಆದಷ್ಟು ಬೇಗನೆ ಆರೋಪಿಗಳನ್ನು ಬಂದಿಸುವಂಥದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ:– ಮೊದಲು FIR ಮಾಡಿ, ನಂತರ ಏನಾದರೂ ಮಾಡಿ.

ಶ್ರೀ ಕೆ.ಜೆ. ಜಾರ್ಜ್:– FIR ಆಗಿದೆ.

ಶ್ರೀ ಸಿ.ಟಿ. ರವಿ:– FIR ಆಗಿದೆ.

ಶ್ರೀ ಕೆ.ಜೆ. ಜಾರ್ಜ್:– 30ನೇ ತಾರೀಖಿನಂದು complaint ಬಂದಿದೆ, 1ನೇ ತಾರೀಖಿನಂದು FIR ಆಗಿದೆ, Circle Inspector ರವರು investigation ಮಾಡುತ್ತಿದ್ದಾರೆ. ಈಗ ಮಾನ್ಯ ರವಿಯವರು ಹೇಳಿದ ಹಾಗೆ ಏನಾದರೂ ಆ Sub Inspector ಅವರ ಕರ್ತವ್ಯದಲ್ಲಿ ಲೋಪದೋಷ ಮಾಡಿದರೆ ಎಂದು ಅದಕ್ಕೋಸ್ಕರ ಒಬ್ಬ DYSP ಯನ್ನು enquiry ಗೆ ಹಾಕಿದ್ದೇವೆ. ಆ DYSP ಯವರಿಂದ enquiry report ಬಂದಮೇಲೆ ಆ Sub Inspector ತಪ್ಪು ಮಾಡಿದ್ರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥದ್ದನ್ನು ಮಾಡುತ್ತೇವೆ.

ಶ್ರೀ ಸಿ.ಟಿ. ರವಿ:– ಇಲ್ಲಿ 2 ವಿಷಯ ಇದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇರೆ ವಿಷಯ. ಮೊದಲನೆಯದಾಗಿ, ಆ ಹೆಣ್ಣು ಮಗಳನ್ನು ರಕ್ಷಣೆ ಮಾಡಬೇಕು, ಆಕೆ minor ಇದ್ದಾರೆ. ಎರಡನೆಯದಾಗಿ, accused ಅನ್ನು arrest ಮಾಡಬೇಕು, ಅವರನ್ನು ಇನ್ನೂ ಏಕೆ arrest ಮಾಡಿಲ್ಲ?

ಶ್ರೀ ಕೆ.ಜೆ. ಜಾರ್ಜ್:– ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಸಿ.ಟಿ. ರವಿ:– ಇವೆಲ್ಲಾ ಎಂಥ ಸೂಕ್ಷ್ಮ ವಿಷಯವೆಂಬುದು ತಮಗೂ ಗೊತ್ತು.

ಶ್ರೀ ಕೆ.ಜೆ. ಜಾರ್ಜ್:– ಅದು ಗೊತ್ತಿದೆ.

ಶ್ರೀ ಸಿ.ಟಿ. ರವಿ:– ಗೊತ್ತಿದ್ದೂ arrest ಮಾಡುವುದಿಲ್ಲವೆಂದರೆ, ಅವರು justice ಗೆ ಎಲ್ಲಿಗೆ ಹೋಗಬೇಕು? ಆ ಹುಡುಗಿಗೆ ಒಂದು ಮಗು ಆದ ಮೇಲೆ ಆ ಆರೋಪಿಗಳನ್ನು arrest ಮಾಡುತ್ತೀರಾ? ಮತ್ತೆ ಆ ಹುಡುಗಿಯನ್ನು ಯಾವಾಗ secure ಮಾಡುತ್ತೀರಿ?

ಅಧ್ಯಕ್ಷರು:– ಮಾನ್ಯ ಮಂತ್ರಿಯವರೆ, ಕೇಳಿ FIR ಆದ ಕೂಡಲೆ ಆರೋಪಿಗಳನ್ನು arrest ಮಾಡಬೇಡವೇ?

ಶ್ರೀ ಕೆ.ಜೆ. ಜಾರ್ಜ್:– ಅವರು ತಲೆ ಮರೆಸಿಕೊಂಡಿದ್ದಾರೆ, ಅವರನ್ನು ಪತ್ತೆ ಹಚ್ಚುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಆದಷ್ಟು ಬೇಗ ಮಾಡುತ್ತೇವೆ, ಈ ವಿಷಯವಾಗಿ ಎಸ್.ಪಿ.ಯವರೊಂದಿಗೆ ಮಾತನಾಡಿದ್ದೇನೆ, ಆದಷ್ಟು ಬೇಗನೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:– Ok, ಮಾನ್ಯ ಮಾಲೀಕಯ್ಯ ವಿ. ಗುತ್ತೇದಾರ್‌ರವರೆ ಕೇಳಿ.

2. ವಿಷಯ: ಕಲಬುರಗಿ ಜಿಲ್ಲೆಯಲ್ಲಿ ಮಳೆ ಇಲ್ಲದೇ ಅನಾವೃಷ್ಟಿಯಾಗಿರುವ ಬಗ್ಗೆ.

*****

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫ್ಜಲ್‌ಪುರ):– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆ ಇಲ್ಲದೇ ಬರಗಾಲವಿದ್ದು, ಇಲ್ಲಿ ದನ–ಕರುಗಳಿಗೆ ನೀರಿಲ್ಲ, ಮೇವಿಲ್ಲ. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರಿದ್ದಾರೆ. ನಮ್ಮ ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿ, ಇಲ್ಲೀ ಬರ ಕಾಮಗಾರಿಗಳು, ದನ–ಕರುಗಳಿಗೆ ಮೇವು, ಗೋಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಕೇಳುತ್ತೇನೆ. ಇಲ್ಲಿ ಮಾನ್ಯ ಕಂದಾಯ ಸಚಿವರು ಇದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಇವರಲ್ಲಿ ಯಾರಾದರೂ ಒಬ್ಬರು ಸಮರ್ಪಕವಾಗಿ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ನಿಮಗೆ ಉತ್ತರ ಯಾರಿಂದ ಬೇಕು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಮಾನ್ಯ ಅಧ್ಯಕ್ಷರೆ, ಇಬ್ಬರಲ್ಲಿ ಯಾರಾದರೂ ಕೊಡಲಿ.